# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2434

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 27.03.2026.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಲವು ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಯಾಗಿ ಉನ್ನತೀಕರಿಸಲು (ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳನ್ನಾಗಿ) ಅಧಿಸೂಚನೆ ಹೊರಡಿಸಿದ ಐದಾರು ತಿಂಗಳುಗಳೇ ಕಳೆದರೂ ಅಧಿಕಾರ ಹಸ್ತಾಂತರ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಂತಹ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ. |
| (ಆ) | ಹಲವು ಗ್ರಾಮ ಪಂಚಾಯಿತಿಗಳು ಅಧಿಸೂಚನೆ ಹೊರಡಿಸಿದ ನಂತರ ಸಾರ್ವಜನಿಕರಿಂದ ಕಂದಾಯ ಪಾವತಿಸಿಕೊಳ್ಳದೆ, ಇ-ಖಾತಾ ನೀಡದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 206 ಗ್ರಾಪಂಅ 2021,(ಇ), ದಿನಾಂಕ: 16.11.2022 ರನ್ವಯ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರನ್ವಯ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಗ್ರಾಮ ಪಂಚಾಯಿತಿಗಳಿಂದ ನಗರ ಪ್ರದೇಶಕ್ಕೆ ವರ್ಗಾಯಿಸಲ್ಪಡಬೇಕಾದ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣೆ ವಿಧಾನದ ಅನ್ವಯ ಕ್ರಮ ವಹಿಸಬೇಕಾಗಿರುತ್ತದೆ. |
| (ಇ) | ಬೆಳಗಾವಿ ಜಿಲ್ಲೆಯ ಹಿಂಡಲಗ, ಬೆನಕನಹಳ್ಳಿ, ಹಿರೇಬಾಗೇವಾಡಿ ಪಂಚಾಯಿತಿಗಳಲ್ಲಿ ದಿನಾಂಕ:07.08.2025 ರಿಂದ ಇಲ್ಲಿಯವರೆಗೆ ವಿತರಿಸಿದ ಇ-ಖಾತಾಗಳ ಸಂಖ್ಯೆ ಎಷ್ಟು; (ಗ್ರಾಮ ಪಂಚಾಯಿತಿವಾರು, ದಿನಾಂಕವಾರು ಸಂಪೂರ್ಣ ವಿವರ ನೀಡುವುದು) | ಗ್ರಾಮ ಪಂಚಾಯತಿವಾರು, ದಿನಾಂಕವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಈ) | ಅಧಿಸೂಚನೆ ಹೊರಡಿಸಿದ ನಂತರ ಕಂದಾಯ ಸ್ವೀಕರಿಸಲು, ಇ-ಖಾತಾ ವಿತರಿಸಲು ಗ್ರಾಮ ಪಂಚಾಯಿತಿಗಳಿಗೆ ಅಧಿಕಾರವಿದೆಯೇ; ಇದ್ದರೆ, ಇದರ ಕುರಿತು ಇರುವ ಸುತ್ತೋಲೆ ಆದೇಶದ ಪ್ರತಿಯನ್ನು ನೀಡುವುದು; | ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 206 ಗ್ರಾಪಂಅ 2021,(ಇ), ದಿನಾಂಕ: 16.11.2022 ರನ್ವಯ ನಗರ ಸ್ಥಳೀಯ ಸಂಸ್ಥೆಗೆ ಅಧಿಸೂಚನೆ ಹೊರಡಿಸಿದ ನಂತರ ಗ್ರಾಮ ಪಂಚಾಯಿತಿಗಳು ಹಸ್ತಾಂತರ ಆಗುವವರೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಅನ್ವಯ ಗ್ರಾಮ ಪಂಚಾಯಿತಿಗಳು ತನಗೆ ವಹಿಸಿದ ಕರ್ತವ್ಯಗಳನ್ನು ನೆರವೇರಿಸಬೇಕಾಗಿರುತ್ತದೆ. |

| | | |
|---|---|---|
| | | ದಿನಾಂಕ:16-11-2022 ರ ಸರ್ಕಾರದ ಸುತ್ತೋಲೆಯನ್ವಯ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರನ್ವಯ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಗ್ರಾಮ ಪಂಚಾಯಿತಿಗಳಿಂದ ವರ್ಗಾಯಿಸಲ್ಪಡಬೇಕಾದ ನಗರ ಪ್ರದೇಶಕ್ಕೆ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣೆ ವಿಧಾನದ ಅನ್ವಯ ಕ್ರಮ ವಹಿಸಬೇಕಾಗಿರುತ್ತದೆ.<br><br>ಸುತ್ತೋಲೆ ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಿದೆ. |
| (ಉ) | ನಗರ ಸ್ಥಳೀಯ ಸಂಸ್ಥೆಗೆ ಅಧಿಸೂಚನೆ ಹೊರಡಿಸಿದ ನಂತರ ಗ್ರಾಮ ಪಂಚಾಯಿತಿಗಳು ವಿತರಿಸಿದ ಇ-ಖಾತಾಗಳು ಅಮಾನ್ಯವಾಗುವುದೇ; ಹಾಗಿದ್ದಲ್ಲಿ, ಸದರಿ ಖಾತೆಗಳ ವಿತರಣೆಯನ್ನು ಸರ್ಕಾರ ತಡೆಯದೆ ಇರಲು ಕಾರಣವೇನು; | ದಿನಾಂಕ:16-11-2022 ರ ಸುತ್ತೋಲೆಯನ್ವಯ ಮಾಹಿತಿ ಹಾಗೂ ದಾಖಲೆಗಳು ಗ್ರಾಮ ಪಂಚಾಯತಿಯಿಂದ ನಗರ ಪ್ರದೇಶಕ್ಕೆ ವರ್ಗಾವಣೆಯಾದ ನಂತರ ಗ್ರಾಮ ಪಂಚಾಯತಿಗಳು ಇ-ಖಾತಾಗಳನ್ನು ವಿತರಿಸಲು ಅವಕಾಶವಿರುವುದಿಲ್ಲ. |
| (ಊ) | ಅಧಿಸೂಚನೆ ಹೊರಡಿಸಿ ಆರು ತಿಂಗಳುಗಳೇ ಕಳೆದರೂ ಅಧಿಕಾರ ಹಸ್ತಾಂತರ ಮಾಡದೆ ಇದ್ದಲ್ಲಿ ಸಾರ್ವಜನಿಕರಿಗೆ ಸೇವೆಗಳನ್ನು ಪಡೆಯಲು ತೊಂದರೆಯಾಗುವುದಿಲ್ಲವೇ? | ನಗರ ಸ್ಥಳೀಯ ಸಂಸ್ಥೆಯಾಗಿ ಅಧಿಸೂಚನೆ ಹೊರಡಿಸಿದ ನಂತರ ದಿನಾಂಕ:16-11-2022 ರ ಸುತ್ತೋಲೆಯನ್ವಯ ಹಸ್ತಾಂತರ ಮಾಡಬೇಕಾಗಿರುತ್ತದೆ. |

ಸಂಖ್ಯೆ: ಗ್ರಾಅಪ 348 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ - 1 - ಅನುಬಂಧ -

| Sl No. | [redacted] | | |
|---|---|---|---|
| 1 | 11-08-2025 | 11 | 0 |
| 2 | 14-08-2025 | 11 | 0 |
| 3 | 20-08-2025 | 8 | 0 |
| 4 | 22-08-2025 | 2 | 0 |
| 5 | 29-08-2025 | 18 | 0 |
| 6 | 30-08-2025 | 2 | 0 |
| 7 | 01-09-2025 | 11 | 0 |
| 8 | 04-09-2025 | 10 | 0 |
| 9 | 10-09-2025 | 5 | 0 |
| 10 | 11-09-2025 | 2 | 0 |
| 11 | 17-09-2025 | 2 | 0 |
| 12 | 18-09-2025 | 23 | 0 |
| 13 | 23-09-2025 | 11 | 0 |
| 14 | 26-09-2025 | 6 | 0 |
| 15 | 29-09-2025 | 21 | 0 |
| 16 | 30-09-2025 | 37 | 0 |
| | Total | 180 | 0 |

| SL No. | [redacted] | | |
|---|---|---|---|
| 1 | 29-10-2025 | 27 | 0 |
| 2 | 06-11-2025 | 2 | 0 |
| 3 | 13-11-2025 | 1 | 0 |
| 4 | 24-11-2025 | 8 | 0 |
| 5 | 19-01-2026 | 1 | 0 |
| 6 | 01-02-2026 | 1 | 0 |
| 7 | 17-02-2026 | 1 | 0 |
| 8 | 18-02-2026 | 3 | 1 |
| 9 | 21-02-2026 | 2 | 0 |
| 10 | 22-02-2026 | 0 | 2 |
| | Total | 46 | 3 |

| SL no. | [redacted] | | |
|---|---|---|---|
| 1 | 11-08-2025 | 1 | 0 |
| 2 | 12-08-2025 | 1 | 0 |
| 3 | 01-09-2025 | 2 | 0 |
| 4 | 15-09-2025 | 94 | 0 |
| 5 | 18-09-2025 | 8 | 0 |
| 6 | 19-09-2025 | 3 | 0 |
| 7 | 30-09-2025 | 23 | 0 |
| 8 | 09-10-2025 | 25 | 0 |
| 9 | 10-10-2025 | 37 | 0 |
| 10 | 16-10-2025 | 28 | 0 |
| 11 | 17-10-2025 | 13 | 0 |
| 12 | 21-10-2025 | 69 | 0 |
| 13 | 23-10-2025 | 1 | 0 |
| 14 | 24-10-2025 | 7 | 0 |
| 15 | 11-11-2025 | 10 | 0 |
| 16 | 14-11-2025 | 26 | 0 |
| 17 | 15-11-2025 | 6 | 0 |
| 18 | 25-11-2025 | 32 | 0 |
| 19 | 28-11-2025 | 6 | 0 |
| | Total | 392 | 0 |

ಅನುಬಂಧ - 2

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಗ್ರಾಅಪ/206/ಗ್ರಾಪಂಅ/2021(e)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:16/11/2022.

**ಸುತ್ತೋಲೆ**

**ವಿಷಯ:** ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರನ್ವಯ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಗ್ರಾಮ ಪಂಚಾಯಿತಿಗಳಿಂದ ನಗರ ಪ್ರದೇಶಕ್ಕೆ ವರ್ಗಾಯಿಸಲ್ಪಡಬೇಕಾದ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ.

* * *

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಅಧ್ಯಾಯ-II, ಪ್ರಕರಣ-3 ರನ್ವಯ ಚಿಕ್ಕ ನಗರವನ್ನು ನಿರ್ದಿಷ್ಟಪಡಿಸುವುದು ಹಾಗೂ ಪ್ರಕರಣ-4(1)(ಕ) ರನ್ವಯ ಚಿಕ್ಕ ನಗರ ಪ್ರದೇಶಕ್ಕೆ ಹೊಂದಿಕೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಸೇರಿಸಬಹುದು. ಪ್ರಕರಣ-4(2) ರಲ್ಲಿ ಅಂತಹ ಪ್ರತಿಯೊಂದು ಅಧಿಸೂಚನೆಯು ಅದು ಯಾವುದೇ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದೆಯೋ ಆ ಸ್ಥಳೀಯ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸತಕ್ಕದ್ದು, ಪ್ರಕರಣ-4(3) ಯಾವುದೇ ಸ್ಥಳೀಯ ಪ್ರದೇಶವನ್ನು ಸೇರಿಸಿದಾಗ ಈ ಅಧಿನಿಯಮ ಅಥವಾ (ಚಿಕ್ಕಪ್ರದೇಶ) ಕ್ಕೆ ಅನ್ವಯವಾಗುವ ಇತರ ಯಾವುದೇ ಕಾನೂನಿನ ಮೇರೆಗೆ ಹೊರಡಿಸಿದ ಅಥವಾ ಪ್ರದತ್ತವಾದ ಎಲ್ಲಾ ಅಧಿಸೂಚನೆಗಳು, ನಿಯಮಗಳು, ಉಪವಿಧಿಗಳು, ಆದೇಶಗಳು, ನಿರ್ಣಯಗಳು, ನಿರ್ದೇಶನಗಳು ಮತ್ತು ಅಧಿಕಾರಗಳು (ವಿಧಿಸಿದ ಯಾವುದೇ ತೆರಿಗೆಯನ್ನು ಒಳಗೊಂಡಂತೆ) (1) ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಸದರಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು ಎಂಬುದಾಗಿ ಇರುತ್ತದೆ ಹಾಗೂ ಪ್ರಕರಣ-357 ರಲ್ಲಿ ಅಗತ್ಯಪಡಿಸಿದಂತೆ "ಗ್ರಾಮ ಪಂಚಾಯಿತಿ ಪ್ರದೇಶ" ವನ್ನು "ಸಣ್ಣ ನಗರ ಪ್ರದೇಶ" ವನ್ನಾಗಿ ಪರಿವರ್ತಿಸಿದ್ದರ ಪರಿಣಾಮವನ್ನು ವಿವರಿಸಲಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ-302(ಎ)ರಂತೆ ಗ್ರಾಮ ಪಂಚಾಯಿತಿಯ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು ಮತ್ತು ಸಂದರ್ಭಾನುಸಾರ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯು ಈಗಾಗಲೇ ನಿರ್ಧರಿತವಾದಂತೆ ಅದಕ್ಕನುಸಾರವಾಗಿ ಕಡಿಮೆಯಾಗತಕ್ಕದ್ದು, (ಬಿ) ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗಿರುವಷ್ಟರ ಮಟ್ಟಿಗೆ ಗ್ರಾಮ ಪಂಚಾಯಿತಿಯ ನಿಧಿ ಅಥವಾ ಅದರ ಸ್ವತ್ತನ್ನು ಸರ್ಕಾರವು ಲಿಖಿತದಲ್ಲಿ ಆದೇಶಿಸಬಹುದಾದಂತೆ ಅಂಥ ಇತರ ಸ್ಥಳೀಯ ಪ್ರದೇಶದ ಅಂಥ ಸ್ಥಳೀಯ ಪ್ರಾಧಿಕಾರದ ನಿಧಿಗೆ ವರ್ಗಾಯಿಸತಕ್ಕದ್ದು ಹಾಗೂ (ಸಿ) ಇತರ ಸ್ಥಳೀಯ ಪ್ರದೇಶದಲ್ಲಿ ಸೇರ್ಪಡೆ ಮಾಡಲಾದ ಅಥವಾ ಇತರ ಸ್ಥಳೀಯ ಪ್ರದೇಶವಾಗಿ ಪರಿವರ್ತಿತವಾದ ಪ್ರದೇಶದಲ್ಲಿ ಉದ್ಭವಿಸುವ ಅಥವಾ ಆ ಪ್ರದೇಶಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು, ಒಪ್ಪಂದಗಳು ಮತ್ತು ಇತರ ವಿಷಯಗಳು ಅಥವಾ ಸಂಗತಿಗಳಿಗೆ (ತೆರಿಗೆ, ಶುಲ್ಕಗಳು, ದರಗಳು ಮತ್ತು ಉಪಕರದ ಬಾಕಿಯೂ ಸೇರಿದಂತೆ) ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ಹಕ್ಕುಗಳು ಮತ್ತು ಬಾಧ್ಯತೆಗಳು ಸ್ಥಳೀಯ ಪ್ರದೇಶದ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂತಹ ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಸ್ಥಳೀಯ ಪ್ರದೇಶದ ಪ್ರಾಧಿಕಾರಕ್ಕೆ ಅನ್ವಯಿಸುವ ಸುಸಂಗತ ಕಾನೂನು ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಉಪವಿಧಿಗಳು ಮತ್ತು ಆದೇಶಗಳ ಅಡಿಯಲ್ಲಿ ಅಂತಹ ಸ್ಥಳೀಯ ಪ್ರಾಧಿಕಾರ ಅಥವಾ ಅದರ ವಿರುದ್ಧ ಜಾರಿಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಿಂದ ಗ್ರಾಮಪಂಚಾಯಿತಿ ಪ್ರದೇಶದ ಜನಸಂಖ್ಯೆ, ಜನಸಂಖ್ಯೆ ಸಾಂದ್ರತೆ, ಸ್ಥಳೀಯ ಆಡಳಿತಕ್ಕಾಗಿ ಉತ್ಪಾದಿಸಲಾದ ರಾಜಸ್ವ, ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡವಾರು, ಆರ್ಥಿಕ ಮಹತ್ವ ಮತ್ತು ನಿಯಮಿಸಬಹುದಾದಂತಹ ಇತರ ಅಂಶಗಳನ್ನು ಆಧರಿಸಿ ಅಂತಹ ಪ್ರದೇಶವನ್ನು ಚಿಕ್ಕ ನಗರ ಪ್ರದೇಶವೆಂದು ಅಧಿಸೂಚನೆ

ಹೊರಡಿಸಿ ನಿರ್ದಿಷ್ಟಪಡಿಸಲಾಗುತ್ತದೆ. ಅಧಿನಿಯಮಗಳಲ್ಲಿ ಉಲ್ಲೇಖಿಸಿದಂತೆ ಗ್ರಾಮಪಂಚಾಯಿತಿಗಳಿಂದ ಪರಿವರ್ತನೆಯಾದಾಗ ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕಾದ ವಿಷಯಗಳನ್ನು ಸ್ಥೂಲವಾಗಿ ಈ ಕೆಳಕಂಡಂತೆ ವಿಂಗಡಿಸಲಾಗಿದೆ:

1. ಸ್ವತ್ತುಗಳ ವರ್ಗಾವಣೆ
2. ಬ್ಯಾಂಕ್ ಖಾತೆಗಳ ವರ್ಗಾವಣೆ
3. ದಾಖಲೆ ಮತ್ತು ಕಡತಗಳ ವರ್ಗಾವಣೆ
4. ಗ್ರಾಮ ಪಂಚಾಯಿತಿಗಳ ಸಿಬ್ಬಂದಿಯ ಮರು ನಿಯೋಜನೆ
5. ಸರ್ಕಾರಿ ಸಿಬ್ಬಂದಿಗಳ ಮರು ನಿಯೋಜನೆ.
6. ವಿದ್ಯುತ್ ಮತ್ತು ಇತರ ಸಾರ್ವಜನಿಕ ಉಪಯುಕ್ತತೆ ಸ್ಥಾಪನಗಳ ನೋಂದಣಿಯನ್ನು ನಗರ ಸ್ಥಳೀಯ ಸಂಸ್ಥೆಗೆ ವರ್ಗಾಯಿಸುವುದು.

ತತ್ಸಂಬಂಧ ಈ ಕೆಳಗೆ ವಿವರಿಸಿರುವ ಅಂಶಗಳನ್ನು ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸಲು ಜಂಟಿ ಸುತ್ತೋಲೆಯನ್ನು ಹೊರಡಿಸಿ ಆದೇಶಿಸಿದೆ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನಿರ್ದಿಷ್ಟಪಡಿಸಿದಂತೆ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಗ್ರಾಮ ಪಂಚಾಯತ್‌ಗಳಿಂದ ನಗರ ಪ್ರದೇಶಕ್ಕೆ ವರ್ಗಾಯಿಸಲ್ಪಡಬೇಕಾದ /ಹಸ್ತಾಂತರಿಸಬೇಕಾದ ವಿಷಯಗಳು ಹಾಗೂ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ:**

1. ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ವೃಂದದ ನೌಕರರಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಅನುಮೋದನೆಗೊಂಡಿರುವ ನೌಕರರ ಪಟ್ಟಿ (ದಿನಾಂಕ:31/10/2017 ರ ಪೂರ್ವದಲ್ಲಿ ನೇಮಕಗೊಂಡವರ ಸಂಪೂರ್ಣ ಸೇವಾ ವಿವರದೊಂದಿಗೆ)
2. ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮಪಂಚಾಯಿತಿ ವೃಂದದ ನೌಕರರುಗಳಲ್ಲಿ ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಅನುಮೋದನೆಗೊಳ್ಳದೆ ಇರುವ ನೌಕರರಪಟ್ಟಿ (ದಿನಾಂಕ:31-10-2017 ರ ಪೂರ್ವದಲ್ಲಿ ನೇಮಕಗೊಂಡವರ ಸಂಪೂರ್ಣ ಸೇವಾ ವಿವರದೊಂದಿಗೆ)
3. ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ನೇಮಕಗೊಂಡು ಸ್ಥಳನಿಯುಕ್ತಿಗೊಳಿಸಲ್ಪಟ್ಟ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1, ಗ್ರೇಡ್-2 ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯಲ್ಲಿ ಖಾಲಿ ಇರುವ ಇತರೆಡೆಯ ಹುದ್ದೆಗಳಿಗನುಸಾರ ಸ್ಥಳನಿಯುಕ್ತಿಗೊಳಿಸುವುದು.
4. ಗ್ರಾಮ ಪಂಚಾಯಿತಿಯಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿರುವ ಗ್ರಾಮವಾರು ನಮೂನೆ-9 ಹಾಗೂ ನಮೂನೆ-11ಎ ಮತ್ತು ನಮೂನೆ-11ಬಿ ರ ದೃಢೀಕೃತ ಪ್ರತಿಗಳು.
5. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿ ಸಾಲಿನವರೆಗೆ ನಿರ್ವಹಿಸಿರುವ ನಮೂನೆ-9 ಹಾಗೂ ನಮೂನೆ-11ಎ ಮತ್ತು ನಮೂನೆ-11ಬಿರ ವಹಿ-ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.
6. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿ ಸಾಲಿನವರೆಗೆ ನಿರ್ವಹಿಸಿರುವ ಡಿಮ್ಯಾಂಡ್ ರಿಜಿಸ್ಟರ್‌ಗಳು- ಆಸ್ತಿ ರಿಜಿಸ್ಟರ್ ಗಳು, ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.
7. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿ ಸಾಲಿನವರೆಗೆ ನಿರ್ವಹಿಸಿರುವ ಬಾಕಿ ಪಟ್ಟಿ ರಿಜಿಸ್ಟರ್‌ಗಳು ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.
8. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿಸಾಲಿನವರೆಗೆ ಗ್ರಾಮ ಪಂಚಾಯಿತಿ ಮಾಲೀಕತ್ವದಲ್ಲಿರುವ ಚರಾಸ್ತಿಗಳ ವಿವರ ಹಾಗೂ ರಿಜಿಸ್ಟರ್‌ಗಳು - ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.

9. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿ ಸಾಲಿನವರಗೆ ಗ್ರಾಮ ಪಂಚಾಯಿತಿ ಮಾಲೀಕತ್ವದಲ್ಲಿರುವ ಸ್ಥಿರಾಸ್ತಿಗಳ ವಿವರ ಹಾಗೂ ಸಂಬಂಧಿಸಿದ ರಿಜಿಸ್ಟರ್‌ಗಳು - ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.
10. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಚಾಲ್ತಿ ಸಾಲಿನವರಗೆ ಗ್ರಾಮ ಪಂಚಾಯಿತಿ ಮಾಲೀಕತ್ವದಲ್ಲಿರುವ ಗುತ್ತಿಗೆ ನೀಡಿರುವ ಸ್ಥಿರಾಸ್ತಿಗಳ ವಿವರ ಹಾಗೂ ರಿಜಿಸ್ಟರ್‌ಗಳು – ಪ್ರತ್ಯೇಕವಾಗಿ ಗ್ರಾಮವಾರು ಪ್ರತಿಗಳು.
11. ಪಂಚಾಯಿತಿ ಪ್ರಾರಂಭದ ಸಾಲಿನಿಂದ ಪ್ರಸಕ್ತ ಸಾಲಿನವರಗೆ ನಿರ್ವಹಿಸಲಾಗಿದ್ದ ಚಾಲ್ತಿಯಲ್ಲಿರುವ ಎಲ್ಲಾ ಬ್ಯಾಂಕ್ ಖಾತೆಗಳ ವಿವರ – ಬಾಕಿಯಿರುವ ಹಣದ ವಿವರಗಳೊಂದಿಗೆ;
12. ವಿವಿಧ ಬ್ಯಾಂಕ್‌ಗಳಲ್ಲಿರುವ ಅನುಪಯುಕ್ತ ಬ್ಯಾಂಕ್ ಖಾತೆಗಳ ವಿವರ ಮತ್ತು ಬ್ಯಾಂಕ್ ಖಾತೆಗಳಲ್ಲಿರುವ ಬಾಕಿ ಹಣದ ವಿವರಗಳೊಂದಿಗೆ;
13. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಲ್ಲಿ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾಗಿರುವ ಅನುದಾನಗಳಲ್ಲಿ ಬಳಕೆಯಾಗಿರುವ ಮೊತ್ತ ಮತ್ತು ಬಳಕೆಯಾಗದೇ ಉಳಿದಿರುವ ಮೊತ್ತದ ವಿವರಗಳೊಂದಿಗೆ.
14. ಗ್ರಾಮ ಪಂಚಾಯಿತಿ ನಿಧಿ/ಕೇಂದ್ರ ಹಣಕಾಸು ಯೋಜನೆ/ ಇತರೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಅಂತ್ಯಗೊಂಡು ಬಿಲ್ ಪಾವತಿಸಲು ಬಾಕಿ ಇರುವ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳು.
15. ಸರ್ಕಾರ ಅಥವಾ ವಿವಿಧ ಇಲಾಖೆಗಳಿಗೆ ಪಾವತಿಸಬೇಕಾಗಿರುವ ಸೆಸ್‌ಗಳ ಬಾಕಿ ವಿವರಗಳು.
16. ವಿವಿಧ ನ್ಯಾಯಾಲಯಗಳಲ್ಲಿರುವ (ಲೋಕಾಯುಕ್ತ, ಉಚ್ಛನ್ಯಾಯಾಲಯ, ಜಿಲ್ಲಾಧಿಕಾರಿಗಳ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಕಾರ್ಯನಿರ್ವಾಹಕ ಅಧಿಕಾರಿಗಳ ನ್ಯಾಯಾಲಯ, ಮುಂತಾದವು) ಪ್ರಕರಣಗಳು - ಗ್ರಾಮವಾರು ವಿವರಗಳು.
17. ಮಾಹಿತಿ ಹಕ್ಕು ಅಧಿನಿಯಮ 2005 ರಡಿ ವಿಲೇ ಮಾಡಿದ ಅರ್ಜಿಗಳು ಹಾಗೂ ವಿಲೇ ಮಾಡಬೇಕಾದ ಅರ್ಜಿಗಳ ವಿವರಗಳು.
18. ಋಣಭಾರಗಳ ವಿವರಗಳು.
19. ಗ್ರಾಮ ಪಂಚಾಯಿತಿಗಳಿಂದ ಬೀದಿ ದೀಪ/ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ವ್ಯವಸ್ಥೆಗಳಿಗಾಗಿ ಕರೆದಿರುವ ವಾರ್ಷಿಕ ನಿರ್ವಹಣಾ ಟೆಂಡರ್ ಮಾಹಿತಿ.
20. ಗ್ರಾಮವಾರು ಕೈಪಂಪು ಕೊಳವೆ ಬಾವಿಗಳ ವಿವರಗಳು.
21. ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉಪಯುಕ್ತವಾಗಿರುವ ಕೊಳವೆ ಬಾವಿಗಳ ವಿವರಗಳನ್ನು ಗ್ರಾಮವಾರು (ಕೊಳವೆ ಬಾವಿ ಆಳ, ಪಂಪ್‌ನ ಸಾಮರ್ಥ್ಯ, ವಿದ್ಯುತ್‌ಚ್ಛಕ್ತಿ ಮೀಟರ್ ಸಂಖ್ಯೆಯೊಂದಿಗೆ) ನೀಡುವುದು.
22. ಗ್ರಾಮ ಪಂಚಾಯಿತಿಯಲ್ಲಿರುವ ಅನುಪಯುಕ್ತ ಕೊಳವೆ ಬಾವಿಗಳ ವಿವರಗಳನ್ನು ಗ್ರಾಮವಾರು (ಕೊಳವೆ ಬಾವಿ ಆಳ, ಪಂಪ್‌ನ ಸಾಮರ್ಥ್ಯ, ವಿದ್ಯುತ್‌ಚ್ಛಕ್ತಿ ಮೀಟರ್ ಸಂಖ್ಯೆಯೊಂದಿಗೆ) ನೀಡುವುದು.
23. ಗ್ರಾಮ ಪಂಚಾಯಿತಿಯಲ್ಲಿರುವ ಬೀದಿ ದೀಪಗಳ ಮಾಹಿತಿಯನ್ನು ಗ್ರಾಮವಾರು (ವಿದ್ಯುತ್ ಕಂಬದ ಸಂಖ್ಯೆ, ಟ್ಯೂಬ್‌ಲೈಟ್, ಎಸ್.ವಿ. ಲ್ಯಾಂಪ್, ಎಲ್.ಇ.ಡಿ. ಬಲ್ಬ್‌ಗಳ ವಿವರಗಳೊಂದಿಗೆ) ಒದಗಿಸುವುದು.
24. ಗ್ರಾಮ ಪಂಚಾಯಿತಿಯಲ್ಲಿರುವ ರಸ್ತೆಗಳ ವಿಸ್ತೀರ್ಣ ಗ್ರಾಮವಾರು ನೀಡುವುದು.
25. ಗ್ರಾಮ ಪಂಚಾಯಿತಿಯಲ್ಲಿರುವ ಓವರ್ ಹೆಡ್ ಟ್ಯಾಂಕ್‌ಗಳ ಮಾಹಿತಿಯನ್ನು ಗ್ರಾಮವಾರು (ನಿರ್ಮಾಣ ವರ್ಷ, ಟ್ಯಾಂಕ್‌ನ ಸಾಮರ್ಥ್ಯ ಹಾಗೂ ದುರಸ್ತಿ ಮಾಡಿದವ ರ್ಷಗಳು) ನೀಡುವುದು.
26. ಗ್ರಾಮ ಪಂಚಾಯಿತಿಯಲ್ಲಿರುವ ಕಿರುನೀರು ಸರಬರಾಜು ಯೋಜನೆಗಳು (ನಿರ್ಮಾಣದ ವರ್ಷ, ತೊಂಬೆಗಳ ಸಂಖ್ಯೆ ಹಾಗೂ ಸಾಮರ್ಥ್ಯ ಹಾಗೂ ದುರಸ್ತಿ ಮಾಡಿದ ವರ್ಷಗಳು)
27. ಗ್ರಾಮ ಪಂಚಾಯಿತಿಯಲ್ಲಿರುವ ಆರ್.ಓ. ಸ್ಥಾವರಗಳು (ಸ್ಥಾಪನೆಯಾದ ವರ್ಷ, ಸಾಮರ್ಥ್ಯ)
28. ಗ್ರಾಮ ಪಂಚಾಯಿತಿಯ ಕಸ ನಿರ್ವಹಣೆಗಾಗಿ ಉಪಯೋಗಿಸುತ್ತಿರುವ ಎಲ್ಲಾ ವಾಹನಗಳ ವಿವರ ಮತ್ತು ಸಾಮಾಗ್ರಿಗಳು ಹಾಗೂ ರಾಸಾಯನಿಕ ಸಾಮಾಗ್ರಿಗಳು ವಿವರಗಳು.
29. ಗ್ರಾಮ ಪಂಚಾಯಿತಿಯಲ್ಲಿರುವ ಗ್ರಾಮವಾರು ಸರ್ಕಾರಿ ಸ್ವತ್ತುಗಳು.

30. ಲೆಕ್ಕ ಪರಿಶೋದನೆಯಾಗಿ ದುರುಪಯೋಗದ ಪ್ರಕರಣಗಳಲ್ಲಿ ವಸೂಲಾತಿಗಾಗಿ ಇರುವ ವಿವರಗಳನ್ನು ನೀಡುವುದು.
31. ಹಸ್ತಾಂತರಕ್ಕೆ ಕುರಿತಂತೆ ಸಮಾಲೋಚಿಸಿ ಆದೇಶಗಳನ್ನು ಹೊರಡಿಸುವ ಸಲುವಾಗಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ:

| | | | |
|---|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | - | ಅಧ್ಯಕ್ಷರು |
| 2 | ಉಪಕಾರ್ಯದರ್ಶಿ, ಆಡಳಿತ/ಅಭಿವೃದ್ಧಿ | - | ಸದಸ್ಯರು |
| 3 | ಮುಖ್ಯ ಯೋಜನಾಧಿಕಾರಿ | - | ಸದಸ್ಯರು |
| 4 | ಮುಖ್ಯ ಲೆಕ್ಕಾಧಿಕಾರಿ | - | ಸದಸ್ಯರು |
| 5 | ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ | - | ಸದಸ್ಯರು |
| 6 | ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿ | - | ಸದಸ್ಯರು |
| 7 | ಸಂಬಂಧಪಟ್ಟ ಜಿಲ್ಲೆಗಳ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ | - | ಸದಸ್ಯರು |
| 8 | ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ | - | ಸದಸ್ಯ ಕಾರ್ಯದರ್ಶಿ. |

32. ಹಸ್ತಾಂತರ ಪ್ರಕ್ರಿಯೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿಯೇ ವಿವರಗಳನ್ನು ಒದಗಿಸಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರವನ್ನು ಮಾಡುವುದು. ಕಾರ್ಯನಿರ್ವಾಹಕ ಅಧಿಕಾರಿಗಳು ಹಸ್ತಾಂತರ ಪೂರ್ಣಗೊಂಡ ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಮಾಡುವುದು.

**ನಗರಾಭಿವೃದ್ಧಿ ಇಲಾಖೆಯು ನಿರ್ದಿಷ್ಟಪಡಿಸಿದಂತೆ ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾದಾಗ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನ:**

a. ಸಂಪೂರ್ಣ ಕಾರ್ಯಭಾರ ಹಸ್ತಾಂತರ ಪ್ರಕ್ರಿಯೆಯು ಒಂದು ಬಾರಿಯ ಪ್ರಕ್ರಿಯೆಯಾಗಿರಬೇಕು.
b. ಸಂಪೂರ್ಣ ಕಾರ್ಯಭಾರ ಹಸ್ತಾಂತರ ಪ್ರಕ್ರಿಯೆಗೆ ಪರಿವರ್ತನೆಯ ಆದೇಶವಾದ ಒಂದು ತಿಂಗಳ ಕಾಲಾವಕಾಶವನ್ನು ನೀಡಬೇಕು.
c. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ತೀರ್ಮಾನಿಸಿದಂತೆ ಹಸ್ತಾಂತರ ಪ್ರಕಿಯೆಯನ್ನು ಕೈಗೊಳ್ಳುವುದು.
d. ಸಂಪೂರ್ಣ ಕಾರ್ಯಭಾರ ಹಸ್ತಾಂತರ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಮುನ್ನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದಿಂದ ಆಯಾ ಗ್ರಾಮ ಪಂಚಾಯಿತಿ ಲೆಕ್ಕ ಪರಿಶೋದನೆಯಾಗಿ, ವರದಿ ಸಿದ್ಧಪಡಿಸಲು ಅನುವು ಮಾಡಿಕೊಡುವುದು.
e. ಗ್ರಾಮ ಪಂಚಾಯಿತಿಯಲ್ಲಿ ಕೇಂದ್ರ/ರಾಜ್ಯವಲಯದ ಮಹತ್ವಾಕಾಂಕ್ಷಿ ಯೋಜನೆಗಳು ಅಂದರೆ ಕೇಂದ್ರ ಹಣಕಾಸು ಆಯೋಗ, ಸ್ವಚ್ಛ ಭಾರತ್ ಮಿಷನ್, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಗ್ರಾಮ ವಿಕಾಸ ಯೋಜನೆ ಇತ್ಯಾದಿ, ಇದರಡಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಹಸ್ತಾಂತರ ಮಾಡಿಕೊಂಡು ನಗರ ಸ್ಥಳೀಯ ಸಂಸ್ಥೆಗಳ ಸೂಕ್ತವಾದ ಅನುದಾನದಲ್ಲಿ ಮುಂದುವರಿಸುವುದು.
f. ಗ್ರಾಮ ಪಂಚಾಯಿತಿಗೆ ಮಂಜೂರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮರು ನಿಯೋಜನೆ ಮಾಡಿಕೊಳ್ಳುವುದು.

28/11/

g. ಗ್ರಾಮ ಪಂಚಾಯಿತಿ ಪ್ರಾರಂಭವಾದಾಗಿನಿಂದ ಚಾಲ್ತಿ ಸಾಲಿನವರೆಗೆ ನಡೆಸಿದ ಎಲ್ಲಾ ಸಭೆಯ ನಡವಳಿ ವಹಿಗಳು.
h. ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೈಯಕ್ತಿಕ/ಸೇವಾ ಮಾಹಿತಿ, ವೇತನ/ಕಡಿತ-ವಸೂಲಾತಿ ವಿವರದ ಕಡತಗಳು.
i. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಸಂತೆ ಸುಂಕ, ವಾಹನ ನಿಲ್ದಾಣ ಶುಲ್ಕ, ಕಸಾಯಿಖಾನೆ, ಮಾರುಕಟ್ಟೆ, ನೆಲಬಾಡಿಗೆ ಮೊಬೈಲ್ ಟವರ್ ಬಾಡಿಗೆ ಹಾಗೂ ಇತರ ಬೇಡಿಕೆ ಮತ್ತು ವಸೂಲಾತಿ ವಿವರ ಮತ್ತು ಇನ್ನಿತರ ಶುಲ್ಕಗಳ ವಸೂಲಿಗೆ ಸಂಬಂಧಿಸಿದ ಹರಾಜು ಕಡತಗಳು.
j. ಗ್ರಾಮ ಪಂಚಾಯಿತಿ ಆಶ್ರಯ ಯೋಜನೆ ಅಥವಾ ಇನ್ನಿತರ ಯಾವುದೇ ವಸತಿ ಯೋಜನೆಯಡಿ ನಿರ್ಮಾಣ ಮಾಡಿರುವ ಬಡಾವಣೆಗಳಲ್ಲಿನ ನಿವಾಸಿಗಳಿಗೆ ನೀಡಿರುವ ನಿವೇಶನ/ಮನೆಗಳ ಹಕ್ಕುಪತ್ರ ವಿತರಿಸಿರುವ ಮೂಲ ರಿಜಿಸ್ಟರ್.
k. ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿ, ಕರ್ನಾಟಕ ವಸತಿ ನಿಗಮ ಅಥವಾ ಆರ್.ಜಿ.ಆರ್.ಹೆಚ್.ಸಿ.ಎಲ್ ನಿಂದ ನೇರವಾಗಿ ಬಡಾವಣೆ ನಿರ್ಮಾಣ ಮಾಡಿ ಮನೆ/ನಿವೇಶನ ಹಂಚಿದ್ದಲ್ಲಿ, ಅದರ ಮೂಲ ರಿಜಿಸ್ಟರ್.
l. ಗ್ರಾಮ ಪಂಚಾಯಿತಿ ಪ್ರಾರಂಭದಿಂದ ಪ್ರಸಕ್ತ ಸಾಲಿನವರೆಗಿನ ಲೆಕ್ಕ ಪರಿಶೋಧನಾ ವರದಿಗಳು.
m. ಗುತ್ತಿಗೆದಾರರಿಂದ ಪಡೆದ ಇ.ಎಂ.ಡಿ, ಸೆಕ್ಯೂರಿಟಿ ಡಿಪಾಸಿಟ್ ಹಾಗೂ ಮಳಿಗೆ ಬಾಡಿಗೆದಾರರಿಂದ ಪಡೆದ ಠೇವಣಿಗಳ ವಹಿ.
n. ಗ್ರಾಮ ಪಂಚಾಯಿತಿಯಲ್ಲಿನ ಅಧಿಕೃತ ಹಾಗೂ ಅನಧಿಕೃತ ನೀರಿನ ಸಂಪರ್ಕಗಳ ವಿವರ (ಗ್ರಾಮವಾರು ಪಟ್ಟಿ).
o. ಮಾಹಿತಿ ಹಕ್ಕು ಅಧಿನಿಯಮದಡಿ 4(1)ಎ 4(ಬಿ) ಅಧಿಸೂಚನೆ ವಿವರ.

**(ಎಲ್.ಕೆ. ಅತೀಕ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
(ಪಂಚಾಯತ್ ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**(ಡಾ|| ಅಜಯ್ ನಾಗಭೂಷಣ್ ಎಂ.ಎನ್)**
ಸರ್ಕಾರದ ಕಾರ್ಯದರ್ಶಿ (ಪೌರಾಡಳಿತ ಮತ್ತು
ನಗರಾಭಿವೃದ್ಧಿ ಪ್ರಾಧಿಕಾರಗಳು)
ನಗರಾಭಿವೃದ್ಧಿ ಇಲಾಖೆ

**ಇವರಿಗೆ:**

1. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಹಳೆ ಕಟ್ಟಡ ಕಛೇರಿ, ಕೆ.ಜಿ.ರಸ್ತೆ, ಬೆಂಗಳೂರು
2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು
5. ಎಲ್ಲಾ ಜಿಲ್ಲೆಗಳ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ನಗರಾಭಿವೃದ್ಧಿ/ಪೌರಾಡಳಿತ ಇಲಾಖೆ
6. ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಮುಖ್ಯಮಂತ್ರಿಯವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ರವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರದ ರವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

4. ಸರ್ಕಾರದ ಪ್ರಧಾನಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತುಸಾಂಖ್ಯಿಕ ಇಲಾಖೆರವರ ಆಪ್ತಕಾರ್ಯದರ್ಶಿ, ಬಹುಮಹಡಿಕಟ್ಟಡ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
8. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಎಲ್ಲಾ ಆಯುಕ್ತರು / ವ್ಯವಸ್ಥಾಪಕ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು.
11. ವಿಶೇಷ ಅಧಿಕಾರಿ (ಜಿ.ಪಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
13. ಮುಖ್ಯಸ್ಥರು, ವಿಕೇಂದ್ರೀಕರಣ ವಿಶ್ಲೇಷಣಾ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
14. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್ ಗ್ರಾ ಮತ್ತು ಪಂ.ರಾಜ್ ಇಲಾಖೆ.
15. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

*****